# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 35/2021**

**ಕಲಂ 299 ರಡಿಯಲ್ಲಿ ಸಾಕ್ಷಿವಿಚಾರಣೆಃ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 14-02-2023 ರಂದು ಪ್ರಮಾಣ ಮಾಡಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಃ ಸುಭಾಸ ವಾಡ್ಕರ | ಪ್ರಾ.ಸಾ ಃ 06 |
| ತಂದೆ ಃ ಗಂಡ ಹೆಸರು | ಃ ಕೃಷ್ಣಪ್ಪ | ಚಾ.ಸಾ ಃ 03 |
| ವಯಸ್ಸು | ಃ 37 ವರ್ಷ | |
| ಉದ್ಯೋಗ | ಃ ಕಟಿಂಗ್ ಸಲೂನ | |
| ವಾಸಸ್ಥಳ | ಃ ದೇವಿಕೊಪ್ಪ | |

**ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದ**

ಈಗ ನೋಡುತ್ತಿರುವ ದಾಖಲೆಗಳಲ್ಲಿ ಸಾಕ್ಷಿ ಸಹಿ ಗುರುತಿಸಿದ್ದು, ಸದರಿ ಮಹಜರ ಹಾಗೂ ನಕ್ಷೆಗಳನ್ನು ನಿಪಿ-7 ರಿಂದ 9 ಎಂದು, ಸಾಕ್ಷಿ ಸಹಿ ನಿಪಿ-7(ಎ), 8(ಎ) ಮತ್ತು 9(ಎ) ಎಂದು ಗುರುತಿಸಿದೆ. ಸುಮಾರು 8-9 ವರ್ಷಗಳ ಹಿಂದೆ ನಾನು ಕಲಘಟಗಿಗೆ ಬಂದಾಗ ಪೋಲೀಸರ ವಿನಂತಿ ಮೇರೆಗೆ ಸಹಿ ಮಾಡಿದ್ದು, ನನ್ನ ಸಮಕ್ಷಮ ಯಾವುದೆ ಮಹಜರ ಮಾಡಿಲ್ಲ, ಯಾವುದೆ ವಾಹನಗಳನ್ನು ನೋಡಿಲ್ಲ.

*(ಮಾನ್ಯ ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,* ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಎ ಪಿ ಪಿ ಯುವರಿಂದಃ**

ದಿನಾಂಕ 17.08.2016 ರಂದು ಪೋಲೀಸರು ನನ್ನನ್ನು ಹಾಗೂ ಚಾಸಾ-2 ರವರನ್ನು ಗಲಗಿನಕಟ್ಟಿ ಕ್ರಾಸ್ ಹತ್ತಿರ ಕರೆಸಿ ನಮ್ಮ ಸಮಕ್ಷಮ ನಿಪಿ-7 ರಂತೆ ಮಹಜರ ಮಾಡಿ, ನಿಪಿ-8 ರಂತೆ ನಕ್ಷೆ ತಯಾರಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಂತರ ದಿನಾಂಕ 25.09.2016 ರಂದು ಪೋಲೀಸರು ನನ್ನನ್ನು ಹಾಗೂ ಚಾಸಾ-2 ರವರನ್ನು ಠಾಣೆಗೆ ಕರೆಯಿಸಿ ನಮ್ಮ ಸಮಕ್ಷಮ ನಿಪಿ-9 ರಂತೆ ಮಹಜರ ಮಾಡಿ, ವಶಪಡಿಸಿಕೊಂಡಿದ್ದ ವಾಹನ ಸಂಖ್ಯೆ ಕೆಎ 25/ಇಪಿ 9614 ನ್ನು ಸಂಬಂಧಪಟ್ಟವರಿಗೆ ಬಿಡುಗಡೆಗೊಳಿಸಿದ್ದಾರೆ ಎಂದರೆ ಸರಿಯಲ್ಲ. ನನ್ನಸಮಕ್ಷಮ ಮಹಜರ ಹಾಗೂ ನಕ್ಷೆ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.